ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಈಗ ನನ್ನ ಹತ್ತಿರ ಬಂದು ಕೇಳಿಕೊಂಡು ಹೋಗಿ, ಸುಮ್ಮನೆ ಕುಳಿತುಕೊಳ್ಳುತ್ತಿದ್ದಾರೆ

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಉತ್ತರ ಬೇಕಾಗಿಲ್ಲ ಎಂದು ಕಾಣುತ್ತದೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಕುಳಿತುಕೊಂಡು ಎಲ್ಲಾ ನೋಡಿಕೊಂಡು ಹೋಗಿ ನಾನು ಪ್ರಶ್ನೆ ಕೇಳುವುದಿಲ್ಲ ಎಂದು ಕುಳಿತುಕೊಂಡರೆ ಹೇಗೆ ?

VII. ಬಂಟ್ವಾಳ ತಾಲ್ಲೂಕಿನ ವಿಟ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯರನ್ನು ನೇಮಿಸುವುದೂ.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕಿನ ವಿಟ್ಲದಲ್ಲಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದ್ದು, ಇದರಲ್ಲಿ ಓರ್ವ ವೈದ್ಯಾಧಿಕಾರಿಗಳು ಮಾತ್ರ ಇದ್ದಾರೆ. ಈ ಆಸ್ಪತ್ರೆಗೆ ಹಿಂದಿನ ವರ್ಷಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡುತ್ತಾ ಬಂದಿದ್ದು, ಆದರೆ ಸಂಬಂಧಪಟ್ಟವರು ಕೆಲಸಕ್ಕೆ ಇದುವರೆವಿಗೂ ಹಾಜರಾಗಿಲ್ಲ. ಕಾರಣ ಏನೆಂದು ತಿಳಿಯದೆ ಆ ಪ್ರದೇಶದ ಸಾರ್ವಜನಿಕರು ತಂಬಾ ಬೇಸತ್ತಿದ್ದಾರೆ ಮತ್ತು ನಿರಾಶರಾಗಿದ್ದಾರೆ.

ಇತ್ತೀಚಿನ ಸುದ್ದಿಯಂತೆ ಈ ಬಾರಿಯೂ ಸಹ ಓರ್ವ ಮಹಿಳಾ ವೈದ್ಯಾಧಿಕಾರಿಯು ನೇಮಕಾತಿ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದ್ದು ಅವರೂ ಸಹ ಇಹುವರೆಗೆ ಕೆಲಸಕ್ಕೆ ಹಾಜರಾಗಲಿಲ್ಲ. ವಿಟ್ಲ ನಗರ ಮಂತ್ತು ಆಸುಪಾಸಿಗೆ ಇದೊಂದೇ ಪ್ರಮುಖ ಆಸ್ಪತ್ರೆ ಇದ್ದು, ಇಲ್ಲಿ ಓರ್ವ ಮಹಿಳಾ ವೈದ್ಯಾಧಿಕಾರಿಯು ಅವಶ್ಯಕತೆ ತೀಫ್ರವಾಗಿದೆ. ಜನರ ಈ ಕೋರಿಕೆಯನ್ನು ಈಡೇರಿಸುವ ದಿಸೆಯಲ್ಲಿ ಮಾನ್ಯ ಸರಕಾರ ಸೂಕ್ತ ಕ್ರಮವನ್ನು ಶೀಫ್ರದಲ್ಲಿ ಕೈಕೊಳ್ಳುವ ಬಗ್ಗೆ ಆಶಿಸುತ್ತೇನೆ ಹಾಗೂ ಈ ಮೂಲಕ ಒತ್ತಾಯಿಸುತ್ತೇನೆ.

ಎರಡನೆಯದಾಗಿ. ಸದರಿ ಆಸ್ಪತ್ರೆಗೆ ಹೊಂದಿಕೊಂಡಂತೆ ಒಂದೂ ಶವ ಪರೀಕ್ಷಾಗಾರದ ಅವಶ್ಯಕತೆ ಇದ್ದು ಅದನ್ನು ಶೀಘ್ರದಲ್ಲಿ ವ್ಯವಸ್ಥೆಗೊಳಿಸಿಕೊಡಬೇಕಾಗಿ ವಿನಂತಿಸುತ್ತೇನೆ.

ವಿಟ್ಲ ಸರಕಾರಿ ಆಸ್ಪತ್ರೆಯನ್ನು ವಿಸ್ತರಿಸಿ, ಸುಮಾರು ೨೦ ಹಾಸಿಗೆಗಳ ವ್ಯವಸ್ಥೆಗೊಳಿಸುವ ಯೋಜನೆ ಸರಕಾರದ ಪರಿಶೀಲನೆಯಲ್ಲಿದ್ದು ಅದಕ್ಕಾಗಿ ಅಗತ್ಯವಿರುವ ಭೂಮಿಯನ್ನು ಸಹ ಕಾದಿರಿಸಲಾಗಿದೆ. ಈ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮಗಳೇನೆಂದು ತಿಳಿಯಬಯಸುತ್ತೇನೆ. ಈ ವಿಸ್ತರಣಾ ಕಾರ್ಯವನ್ನು ಶೀಘ್ರದಲ್ಲಿ ಕಾರ್ಯಗತಗೊಳಿಸುವ ಬಗ್ಗೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ಉತ್ತರವನ್ನು ತರಿಸಿ ಮಾನ್ಯ ಸದಸ್ಯರಿಗೆ ಕಳುಹಿಸುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದ್ದು, ಇಲ್ಲದೇ ಇದ್ದಹಾಗೆ ಇದ್ದಾರೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

VIII. ರಾಜ್ಯದಲ್ಲಿರುವ ಅಂಗವಿಕಲರಿಗೆ ಮಾಶಾಸನವನ್ನು ಕೊಡುವುದು.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ಕರ್ನಾಟಕದಲ್ಲಿ ಸುಮಾರು ೨೬ ಸಾವಿರ ಹಳ್ಳಿಗಳು ಇವೆ. ಸರ್ವೆ ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಗಳಲ್ಲಿ ಪ್ರಕೃತಿಯಿಂದ ವಂಚಿತರಾದ ಅಂಗವಿಕಲರಾದ ಮಹಿಳೆಯರೂ, ಪುರುಷರೂ ಹಾಗೂ ಮಕ್ಕಳು ಇದ್ದಾರೆ. ಆದರೆ ಇವರೆಲ್ಲರಿಗೂ ಸರಕಾರದ